## ಇಲ್ಲಿಯವರೆಗೆ...



ಕೇರಳದ ದೊಡ್ಡ ರಬ್ಬರ್ ಉದ್ಯಮಿಯೊಬ್ಬರ ಯಾವುದೋ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೊಚ್ಚಿನ್‌ಗೆ ಬಂದ ಕ್ರಾಂತಿ ಕಿರಣ್‌ರೆಡ್ಡಿಗೆ ಎದುರಾದುದು ಅಭೂತಪೂರ್ವ ಆತಿಥ್ಯ. ಜೊತೆಗೆ ಬರಬೇಕಾಗಿದ್ದ ಕಾಕಿಗಡ್ಡ ರಾಘವರೆಡ್ಡಿ ಕುಟುಂಬದಲ್ಲಿ ಸಾವೊಂದು ಸಂಭವಿಸಿದ್ದರಿಂದಾಗಿ ಪ್ರಯಾಣವನ್ನು ಮುಂದೂಡಿದ್ದರೂ, ಅಪರಿಚಿತ ಸ್ಥಳದಲ್ಲಿ ಕಿರಣ್‌ರೆಡ್ಡಿಗೆ ಯಾವುದೇ ಕೊರತೆ ಎದುರಾಗಲಿಲ್ಲ. ವಿಮಾನನಿಲ್ದಾಣದಿಂದ ಜೊತೆಯಾದ ಡಾ. ಅರುಂಧತಿ ಪಿಳ್ಳೈ, ಸೌಂದರ್ಯ ಮತ್ತು ಬುದ್ಧಿಮತ್ತೆಯ ಅಪೂರ್ವ ಸಮೀಕರಣದಂತೆ ಕ್ರಾಂತಿಯ ಕಣ್ಣಿಗೆ ಕಾಣಿಸಿದಳು. ಯಾವ ಸೆವೆನ್ ಸ್ಟಾರ್ ಹೋಟೆಲ್‌ಗೂ ಕಡಿಮೆಯಿಲ್ಲದ ಕೆ.ಎಮ್. ನಯ್ಯಾರರ ಮನೆಯಲ್ಲಿ ಸುಖ ಮತ್ತು ಅಚ್ಚರಿಯ ಅನುಭವಗಳು ಒಂದೊಂದಾಗಿ ಕ್ರಾಂತಿಯನ್ನು ಎದುರಾಗತೊಡಗಿದವು.

ತುಂಬಾ ಡೆವಲಪ್ ಆಗಿದೆ. ಆದರೆ ಶಬರಿಮಲೆಯ ರಸ್ತೆಗಳಲ್ಲಿ, ದೇವಳಂ ಸುತ್ತಮುತ್ತ ಹಂದಿಗಳದು ವಿಪರೀತ ಕಾಟ. ಗಲೀಜೆಂದರೆ ಗಲೀಜು. ಏನು ಮಾಡೋದ್ದೇಳಿ, ಮನುಷ್ಯ ಇರುವ ಕಡೆಯಲ್ಲೆಲ್ಲ ಗಲೀಜು ಇದ್ದೇ ಇರುತ್ತದೆ. ಮನುಷ್ಯರು ದೇವರುಗಳನ್ನೂ ಕೆಡಿಸಿಟ್ಟುಬಿಡುತ್ತಾರೆ'. ಅಗತ್ಯಕ್ಕಿಂತ ಹೆಚ್ಚಾಗಿಯೇ ಹೇಳಿದ್ದನಾತ. ಇತ್ತೀಚೆಗೆ ಶಬರಿಮಲೆ ದೇವಸ್ಥಾನವನ್ನು ಮಹಿಳೆಯರು ಪ್ರವೇಶಿಸುವ ಬಗ್ಗೆ ಸುಪ್ರೀಂ ಕೋರ್ಟಿನ ಆದೇಶ ಮತ್ತು ಶಬರಿಮಲೆಯಲ್ಲಿ ನಡೆದ ಗಲಾಟೆಗಳ ಸುದ್ದಿ ಇನ್ನೂ ಹಸಿಹಸಿಯಾಗಿಯೇ ಇತ್ತು.

'ಇಂಟರ್‌ನ್ಯಾಷನಲ್ ಮಟ್ಟದಲ್ಲಿ ಸುದ್ದಿಯಾಗುವಷ್ಟು ಗಲಾಟೆಗಳಾದವಲ್ಲ ಶಬರಿಮಲೆಯಲ್ಲಿ. ಮಹಿಳೆಯರು ಪ್ರವೇಶಿಸಿದರೆ ದೇವಸ್ಥಾನ ಹೇಗೆ ಅಪವಿತ್ರವಾಗಿಬಿಡುತ್ತದೆ?'. ಭಗವಾನ್ ಕುಟ್ಟಿ ಶಬರಿಮಲೆಯ ಬಗ್ಗೆ ಹೇಳಿದ್ದಕ್ಕೆ ನೆನಪಿಸಿದ್ದೆ ನಾನು.

'ಓಹ್, ಅದೆಲ್ಲ ಬರಿ ರಾಜಕೀಯ ಬಿಡಿ. ಧರ್ಮದ ವಿಚಾರಗಳು ಬೇಗ ಪ್ರಚಾರ ಪಡೆದುಕೊಳ್ಳುತ್ತವೆ. ಮೆನ್ಸೆಸ್ ಆದಾಗ ಹೆಣ್ಣುಮಕ್ಕಳು ನಿತ್ರಾಣರಾಗುವರಲ್ಲದೆ ಶುದ್ಧವಾಗಿರಲು ಕಷ್ಟಸಾಧ್ಯವಾಗುವುದರಿಂದ ಅಂಥ ಪದ್ಧತಿ ಸರಿಯೆನಿಸುತ್ತದೆ. ಅಲ್ಲದೆ ಗಂಡು ಮತ್ತು ಹೆಣ್ಣು ದೇಹಗಳು ಜೊತೆಯಲ್ಲಿದ್ದಾಗ ಭಕ್ತಿ, ಭಯವನ್ನು ಮೀರಿ ಒಂದು ರೀತಿಯ ಅನೈತಿಕ ಆಕರ್ಷಣೆಗೆ ಒಳಗಾಗಿಬಿಡುತ್ತವೆ. ಯಾವುದೇ ಧಾರ್ಮಿಕ ಸ್ಥಳಗಳನ್ನೇ ತೆಗೆದುಕೊಳ್ಳಿ; ಅನ್ಯಾಯ ಅನೈತಿಕ ಚಟುವಟಿಕೆಗಳ ಕೇಂದ್ರಗಳಾಗಿಬಿಟ್ಟಿವೆ. ಮನುಷ್ಯ ಅನೈತಿಕತೆಯನ್ನು ಖಂಡಿಸುತ್ತಾನಾದರೂ ಬಲವಾದ ಆಸಕ್ತಿ ಅವನಿಗೆ ಅನೈತಿಕತೆಯಲ್ಲಿಯೇ ಇರುತ್ತದೆ, ಮತ್ತು ನೈತಿಕತೆಗಿಂತಲೂ ಅನೈತಿಕತೆಯಲ್ಲಿ ಹೆಚ್ಚು ಸುಖವನ್ನು ಪಡೆಯುತ್ತಾನೆ. ಧರ್ಮಗಳೂ ಈಗ ವಿಪರೀತ ಕಮರ್ಷಿಯಲ್ ಆಗಿಬಿಟ್ಟಿವೆ. ಆದರೆ ಶಬರಿಮಲೆಯಲ್ಲಿ ನಡೆದ ಗಲಾಟೆ ಮತ್ತು ಪ್ರಚಾರಗಳಿಂದ ಯಾವ ಪಕ್ಷದವರಿಗೂ ಲಾಭವೇನೂ ಆಗುವಂತಿಲ್ಲ. ಯಾವಾಗಲೂ ಧರ್ಮದ ಎದುರು ರಾಜಕೀಯಕ್ಕೇ ಸೋಲುಂಟಾಗುವುದು. ಅದೆಲ್ಲ ಇರಲಿ ಬಿಡಿ, ನೀವು ರೆಡಿಯಾಗಿ ಬನ್ನಿ ಡ್ಯಾನ್ಸ್ ಪ್ರೋಗ್ರಾಂಗೆ ಹೊರಡಲು ಮಾಧವನ್ ಪಿಳ್ಳೈ ಇಷ್ಟೊತ್ತಿಗೆ ಸಿದ್ಧನಾಗಿರುತ್ತಾನೆ' ಎಂದು ಹೇಳಿ ಬಾಗಿಲು ಮುಂದಿಟ್ಟುಕೊಂಡು ಭಗವಾನ್ ಕುಟ್ಟಿ ಹೊರನಡೆದಿದ್ದ.

ಭಗವಾನ್ ಕುಟ್ಟಿಯ ಅನುಭವಲೇಪಿತ ಮಾತುಗಳನ್ನು ಮೆಲುಕು ಹಾಕುತ್ತಾ ಬಟ್ಟೆಗಳನ್ನು ಧರಿಸುತ್ತಿರುವಾಗ ಲ್ಯಾಂಡ್‌ಲೈನ್ ಮೊಳಗಿತ್ತು.

'ರೆಡಿಯಿದ್ದರೆ ಹೊರಬನ್ನಿ. ಅಪ್ಪ ರೆಡಿಯಾಗಿದ್ದಾರೆ'. ಅರುಂಧತಿಯ ಧ್ವನಿ.

'ಬಂದೆ...' ಎಂದು ಫೋನಿಟ್ಟು ಹೊರನಡೆದಿದ್ದೆ. ಬಿಳಿಯ ಶರ್ಟು, ಪಂಚೆಯುಟ್ಟು ಮಾಧವನ್ ಪಿಳ್ಳೈ ಬಾಗಿಲಿನಲ್ಲಿ ನಿಂತಿದ್ದರು. ಜೊತೆಯಲ್ಲಿ ಮಗಳು ಅರುಂಧತಿ ಪಿಳ್ಳೈ ಕೂಡ ಪೂರ್ತಿ ಬಿಳಿಯ ವಸ್ತ್ರಗಳನ್ನು ಧರಿಸಿ ಕಂಗೊಳಿಸುತ್ತಿದ್ದಳು. ಮೂವರೂ ಲಿಫ್ಟ್ ಏರಿ ಕೊನೆಯ ಅಂತಸ್ತಿನ ಮೂಲಕ ಹೊರ ಬಂದು ಐದು ನಿಮಿಷ ನಡೆದು ಕಮ್ಯುನಿಟಿ ಸೆಂಟರ್ ಸೇರಿದ್ದೆವು. ನೃತ್ಯಗಾತಿ ಬಂದು ಮಾಧವನ್ ಪಿಳ್ಳೈ ಕಾಲುಗಳಿಗೆ ನಮಸ್ಕರಿಸಿದ್ದಳು. ನೃತ್ಯಗಾತಿಗೆ ಸರಳವಾದ ಮೇಕಪ್ ಮಾಡಲಾಗಿತ್ತು. ನಲವತ್ತು ವರ್ಷಗಳ ವಯಸ್ಸಿರಬಹುದಾದ ನೃತ್ಯಗಾತಿ ಮೇಕಪ್‌ನಲ್ಲಿ ಚಿಕ್ಕವಳಾಗಿಯೂ ಸುಂದರವಾಗಿಯೂ ಕಾಣುತ್ತಿದ್ದಳು. ತುರುಬಿಗೆ ಸುತ್ತಿದ್ದ ಮಲ್ಲಿಗೆ ಮೊಗ್ಗು ಅರಳಲು ಮೊದಲಗೊಂಡು ಘಮ್ಮನೆಯ ಸುವಾಸನೆ ಅವಳ ಸುತ್ತಲೂ ಹರಿದಾಡುತ್ತಿತ್ತು. ಅಗಲವಾದ ಅವಳ ಕಣ್ಣುಗಳಲ್ಲಿ ಸ್ಟೇಜ್ ಮೇಲೆ ಅಲಂಕೃತಗೊಂಡಿದ್ದ ಬಣ್ಣ ಬಣ್ಣದ ವಿದ್ಯುತ್ ದೀಪಗಳು ಕಾಮನಬಿಲ್ಲುಗಳನ್ನು ಸೃಷ್ಟಿಸಿದಂತಿದ್ದವು. ಐವತ್ತರವತ್ತು ಮಂದಿ ನೆರೆದಿದ್ದರು. ನೆರೆದವರು ಹೆಚ್ಚಾಗಿ ಹೆಣ್ಣುಮಕ್ಕಳೇ ಆಗಿದ್ದರು. ಎಲ್ಲರೂ ಸಾಲಾಗಿ ಬಂದು ಒಮ್ಮೆ ಮಾಧವನ್ ಪಿಳ್ಳೈಗೆ ನಮಸ್ಕರಿಸಿ ಹಿಂತಿರುಗಿ ಹೋಗಿ ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು. ಸ್ಟೇಜಿನ ಆ ಕಡೆಯ ಕೊನೆಗೂ, ಈ ಕಡೆಯ ಕೊನೆಗೂ ಇಟ್ಟಿದ್ದ ದೊಡ್ಡ ದೀಪಸ್ತಂಭಗಳನ್ನು ಮಾಧವನ್ ಪಿಳ್ಳೈ ಬೆಳಗಿಸಿ ಬಂದು ಮುಂದಿನ ಸಾಲಿನ ನನ್ನ ಪಕ್ಕದ ಆಸನದಲ್ಲಿ ಕುಳಿತಿದ್ದರು. ನನ್ನ ಇನ್ನೊಂದು ಪಕ್ಕ ಅರುಂಧತಿ ಕುಳಿತಿದ್ದಳು. ಅವಳು ಹಾಕಿದ್ದ ಸೆಂಟ್ ಬಹಳ ಇಂಟಿಮೇಟ್ ಆದ ಪರಿಮಳವನ್ನು ಸೂಸುತ್ತಿತ್ತು.

'ಸೆಂಟ್ ಸುವಾಸನೆ ಮತ್ತು ತರಿಸುವಂತಿದೆ...'

ನನ್ನ ಮಾತುಗಳಿಗೆ 'ಓ, ಥ್ಯಾಂಕ್ಸ್, ಒರಿಜಿನಲ್ ಪಾಯ್ಸನ್' ಎಂದು ನಕ್ಕಿದ್ದಳು. ಪಾಯ್ಸನ್ ಎನ್ನುವುದು ಸೆಂಟ್ ಹೆಸರು! ಗೊತ್ತಿತ್ತು ನನಗೆ.

'ಸ್ವೀಟ್ ಪಾಯ್ಸನ್' ಮೆಚ್ಚುಗೆ ವ್ಯಕ್ತಪಡಿಸಿದ್ದೆ.

'ಈಗ ಮಾಡುವ ನೃತ್ಯಕ್ಕೆ ಮೋಹಿನಿಯಾಟ್ಟಾಂ ಎಂದು ಕರೆಯುತ್ತಾರೆ. ನಮ್ಮ ಕೇರಳದ ಕ್ಲಾಸಿಕಲ್ ಡ್ಯಾನ್ಸ್‌ಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ಈಗ ನಡೆಯೋದು ಸೋಲೊ ಮೋಹಿನಿಯಾಟ್ಟಾಂ. ಅಂದಹಾಗೆ ಡ್ಯಾನ್ಸರ್ ಯಾರು ಗೊತ್ತಾ, ನಮ್ಮ ಭಗವಾನ್ ಕುಟ್ಟಿಯ ಮೂರನೇ ಹೆಂಡತಿ ಸಿಂಧು ಮೆನನ್'. ಅಚ್ಚರಿಯ ಅಲೆಯಲ್ಲಿ ಕ್ಷಣ ಮುಳುಗಿಸಿದ್ದಳು ನನ್ನನ್ನು ತನ್ನ ಮಾತುಗಳಿಂದ ಅರುಂಧತಿ ಪಿಳ್ಳೈ.

'ಅರೆರೆ...' ಉದ್ಗಾರ ಹೊರಬಂದಿತ್ತು ನನ್ನ ಬಾಯಿಂದ.

'ನಿಮಗೆ ಡೇರಾ ಸುರ್ಜಿತ್ ರಾಮ್ ರಹೀಮ್ ಬಾಬಾ ಗೊತ್ತಲ್ವ?' ಅವಳ ದಂತಪಂಕ್ತಿಗಳು ಹಾಲಿನಂತೆ ಬೆಳ್ಳಗೆ ಹೊಳೆಯುತ್ತಿದ್ದವು ಪಳಪಳ.

'ಗೊತ್ತಿಲ್ದೆ ಏನು. ಎರಡು ವರ್ಷಗಳ ಹಿಂದೆ ರೇಪ್ ಕೇಸಿನಲ್ಲಿ ಅವನನ್ನು ಅರೆಸ್ಟ್ ಮಾಡ್ದಾಗ ಹರಿಯಾಣದ ಸಿರ್ಸಾದಲ್ಲಿ ಅವನು ಭಕ್ತರು ದಂಗೆ ಎದ್ದು ಲಾಠಿ ಚಾರ್ಜ್ ಮತ್ತು ಗೋಲಿಬಾರ್ ಆದಾಗ ನಾನು ದಿಲ್ಲಿಯಲ್ಲಿ ಇದ್ದೆ. ಜನರನ್ನು ಅವನು ಹೇಗೆ ಸಮ್ಮೋಹನಗೊಳಿಸುತ್ತಿದ್ದ ಅನ್ನೋದೇ ತುಂಬಾ ವಿಸ್ಮಯಕಾರಿಯಾದ ವಿಷಯ. ರಾಜಕಾರಣಿಗಳು, ದೊಡ್ಡ ದೊಡ್ಡ ಅಧಿಕಾರಿಗಳು ಅವನನ್ನು ಆರಾಧಿಸುತ್ತಿದ್ದದ್ದು, ಯುವತಿಯರು ಅವನಿಗೆ ಇನ್ನಿಲ್ಲದೆ ಸೋತು ಪರವಶವಾಗುತ್ತಿದ್ದದ್ದು... ನಂಬಲಸಾಧ್ಯವಾದ ವಿಷಯವೇ ಸರಿ. ಮನುಷ್ಯನ ಕೆಲವು ವಿಶಿಷ್ಟ ವರ್ತನೆಗಳು ಮನೋವಿಜ್ಞಾನದ ಅಧ್ಯಯನಕ್ಕೂ ನಿಲುಕದ ಸಂಗತಿಗಳೆನಿಸುತ್ತವೆ'. ಇನ್ನೂ ಹಸಿಹಸಿಯಾಗಿದ್ದ ಘಟನೆ ನೆನಪಾಗಿ ಹೇಳಿದ್ದೆ.

'ಸಿಂಧು ನರ್ಸಿಂಗ್ ಮಾಡಿ, ಕೊಟ್ಟಾಯಂನ ಪ್ರೈವೇಟ್ ಆಸ್ಪತ್ರೆಯಲ್ಲಿ ಏಳೆಂಟು ವರ್ಷ ನರ್ಸ್ ಆಗಿ ಸೇವೆ ಸಲ್ಲಿಸಿದ್ದಳಂತೆ. ಅಮೆರಿಕಕ್ಕೋ ಇಲ್ಲ ಯೂರೋಪಿಗೋ ಹೋಗಿ ಅಲ್ಲೆ ಸೆಟ್ಲ್ ಆಗಬೇಕೆಂದು ಬಹಳ ಆಸೆ ಇಟ್ಟುಕೊಂಡಿದ್ದಳಂತೆ. ಪಾಸ್‌ಪೋರ್ಟ್, ವೀಸಾಗೂ ಅಪ್ಲೆ ಮಾಡಿದ್ದಳಂತೆ. ಅಷ್ಟರಲ್ಲೇ ಅವಳಿಗೆ ಡಾಕ್ಟರ್ ಅನುರೂಪ್ ಮೆನನ್ ಪರಿಚಯವಾದರಂತೆ. ಆತ